ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ನ್ಯಾಯಾಲಯ, ಕೆ.ಆರ್.ನಗರ

**ಸಿ.ಸಿ. ನಂ.2/2015**

| | |
|---|---|
| ಸಾಕ್ಷಿಯ ಹೆಸರು | ರುಕ್ಮಿಣಿ |
| ತಂದೆ / ಗಂಡ ಹೆಸರು | ವೆಂಕಟೇಶ್ |
| ವಯಸ್ಸು | **48** |
| ಉದ್ಯೋಗ | ಕೂಲಿ |
| ವಾಸ ಸ್ಥಳ | ಅಂಕನಹಳ್ಳಿ |

ಪ್ರಾಸಾ **3**

ಚಾಸಾ **3**

ಸಾಕ್ಷಿಗ ಪ್ರಮಾಣ ವಚನ ಬೋಧಿಸಲಾಯಿತು.

ದಿನಾಂಕ : **27-03-2018.**

ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದಃ-

ಚಾಸಾ-1 ನನ್ನ ಮೈದುನ, ಚಾಸಾ-2 ನನ್ನ ವಾರಗಿತ್ತಿ, ಚಾಸಾ-4 ನನ್ನ ನಾದಿನಿ. ಆರೋಪಿತರು ನಮ್ಮ ಗ್ರಾಮದವರು, ಪರಿಚಯ ಇದೆ. 3 ವರುಷದ ಹಿಂದೆ ಬೆಳಿಗ್ಗೆ 7 ಗಂಟೆ ಸಮಯದಲ್ಲಿ ನಮ್ಮ ಮನೆಯ ಪಕ್ಕದಲ್ಲಿರುವ ಚಾಸಾ-1 ಮತ್ತು 4 ರವರು ನಮ್ಮ ಮನೆಯ ಕುಂಬಳಕಾಯಿ ಗಿಡದಿಂದ ಕುಂಬಳಕಾಯಿಯನ್ನು ಯಾರೋ ಕಿತ್ತುಕೊಂಡು ಹೋಗಿರುತ್ತಾರೆ ಎಂದು ಮಾತಾಡುತ್ತಿದ್ದರು. ಸ್ವಲ್ಪ ದೂರದಲ್ಲಿ ಆರೋಪಿತರೆಲ್ಲರೂ ಧರ್ಮಸ್ಥಳ ಸಂಘದಿಂದ ಮೀಟಿಂಗ್ ಮಾಡುತ್ತಿದ್ದರು. ಆರೋಪಿತರೆಲ್ಲರೂ ಬಂದು ನಮ್ಮನ್ನೇ ಬೈಯ್ಯುತ್ತಿದ್ದಾರೆ ಎಂದು ಚಾಸಾ-1 ರವರ ಮೇಲೆ ಜಗಳ ಮಾಡಲು ಬಂದಿರುತ್ತಾರೆ. ಶಾಂತ, ಸತ್ಯ, ಪುನೀತ್, ರಂಗಸ್ವಾಮಿ ಅವಾಚ್ಯ ಶಬ್ದಗಳಿಂದ ಬೈದು ಕೊಲೆ ಬೆದರಿಕೆ ಹಾಕಿರುತ್ತಾರೆ. ಆಗ ನಾನು ಜಗಳ ಬಿಡಿಸಲು ಹೋದೆ. ಆಗ ಪಲ್ಲವಿ, ಆಶಾ ಎಳೆದುಕೊಂಡು ಕೈಗಳಿಂದ ನನ್ನ ಎದೆಗೆ ಗುದ್ದಿರುತ್ತಾರೆ. ಆಗ ಜಗಳ ಯಾರು ಬಿಡಿಸಿರುವುದಿಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ.

ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಎಪಿಪಿರವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.

ಪಾಟೀ ಸವಾಲುಃ ಮಾನ್ಯ ಎಪಿಪಿರವರಿಂದಃ-

ಆರೋಪಿ ಜಾನಕಿ, ಸಣ್ಣಯ್ಯ, ಜಯಮ್ಮ, ಮಣಿರವರು ಚಾಸಾ-1 ರವರ ಮನೆಗೆ ನುಗ್ಗಿ ಅತಿಕ್ರಮ ಪ್ರವೇಶ ಮಾಡಿರುತ್ತಾರೆ ಎಂದರೆ ನಿಜ ಆಗ ಚಾಸಾ-2 ಮತ್ತು 4 ಬಂದು ಜಗಳ ಬಿಡಿಸಿರುತ್ತಾರೆ ಎಂದರೆ ನಿಜ.

ಆರೋಪಿ ಪರ ವಕೀಲರು ಗೈರು ಹಾಜರು, ಪಾಟೀ ಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ-ಇಲ್ಲಾ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ.ಕೇ.ಸ.ಇ.ಒ.,

(ಶ್ರೀನಾಥ್.ಕೆ.)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ.